**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.</u>**

**<u>ಸಿ.ಸಿ.ನಂ. 1002/2024</u>**

**<u>ಫಿರ್ಯಾದುದಾರರು</u>** : ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**<u>ಆರೋಪಿತರು</u>** : ಎ 1. ದೇವರಾಜ @ ದೇವ ಬಿನ್ ರಮೇಶ್,

ವಯಾಃ 24 ವರ್ಷ,

ವಾಸಃ ಕೈವಾರ ಗ್ರಾಮ,

ಚಿಂತಾಮಣಿ ತಾಲ್ಲೂಕು,

ಚಿಕ್ಕಬಳ್ಳಾಪುರ ಜಿಲ್ಲೆ.

: **<u>ದೋಷಾರೋಪಣೆ</u>** :

**ಶ್ರೀಮತಿ.ಹರ್ಷಿತ, ಬಿ.ಎ., ಎಲ್‌ಎಲ್.ಬಿ.,** ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ., ಆದ ನಾನು ಈ ಮೂಲಕ ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ಆರೋಪಿತನನ್ನು ಚಾಸಾ-1 ರವರು ಕ್ಯಾಂಟರ್ ವಾಹನಕ್ಕೆ ಕ್ಲೀನರ್ ಆಗಿ ಹಾವೇರಿಗೆ ಕರೆದುಕೊಂಡು ಹೋಗಿದ್ದು, ಇದಕ್ಕೆ ಚಾಸಾ-1 ರವರು ಆರೋಪಿಗೆ ರೂ.2,000/- ರೂ ಹಣವನ್ನು ಕೊಟ್ಟಿದ್ದು, ಆರೋಪಿಗೆ ಚಾಸಾ-1 ರವರು ಕಡಿಮೆ ಹಣವನ್ನು ಕೊಟ್ಟಿರುತ್ತಾರೆಂದು ದಿನಾಂಕ 25-03-2024 ರಂದು ರಾತ್ರಿ 11.00 ರ ಸಮಯದಲ್ಲಿ ಚಾಸಾ-1 ರವರು ಚಿಂತಾಮಣಿ ತಾಲ್ಲೂಕು ಕೈವಾರ ಗ್ರಾಮದ ಗುಡಬಾವಿ(ಗವಿ ಕ್ರಾಸ್) ಬಳಿ ಇದ್ದಾಗ, ಆರೋಪಿಯಾದ ನೀವು ಚಾಸಾ-1 ರವರ ಬಳಿಗೆ ಬಂದು ಚಾಸಾ-1 ರವರನ್ನು ಕುರಿತು ಗಾಂಡು ನನ್ನ ಮಗ ನೀನು ಎಂದು ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಆ ಮೂಲಕ **ಭಾ.ದಂ.ಸಂ. ಕಲಂ 504** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

**ಎರಡನೇಯದಾಗಿ,** ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ ಆರೋಪಿಯಾದ ನಿಮ್ಮನ್ನು ಚಾಸಾ-1 ರವರು ಏಕೆ ನನ್ನನ್ನು ಬೈಯುತ್ತಿರುವುದು ಎಂದು ಕೇಳಿದ್ದಕ್ಕೆ ಆರೋಪಿಯಾದ ನೀವು ಚಾಕುವಿನಿಂದ ಚಾಸಾ-1 ರವರ ಎಡಕಣ್ಣಿನ ಹುಬ್ಬಿನ ಬಳಿ ತಿವಿದು ರಕ್ತಗಾಯವನ್ನುಂಟು ಮಾಡಿದ್ದು, ಕಲ್ಲಿನಿಂದ ಕಿವಿ, ಬೆನ್ನು ಮತ್ತು ಎದೆಯ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತೀರಿ, ಆ ಮೂಲಕ ನೀವು **ಭಾ.ದಂ.ಸಂ. ಕಲಂ 324** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

**ಮೂರನೇಯದಾಗಿ**, ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ ಆರೋಪಿಯಾದ ನೀವು ಚಾಸಾ–1 ರವರ ಬಳಿ ಇದ್ದ ಚಾಸಾ–5 ರವರ ಮೊಬೈಲ್ ಫೋನ್ ಅನ್ನು ಹೊಡೆದು ಹಾಕಿ ಸುಮಾರು ರೂ.30,000/– ರೂಗಳಷ್ಟು ನಷ್ಟ ಉಂಟು ಮಾಡಿರುತ್ತೀರಿ, ಆ ಮೂಲಕ ನೀವು **ಭಾ.ದಂ.ಸಂ. ಕಲಂ 427** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

**ಕೊನೇಯದಾಗಿ**, ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ, ಆರೋಪಿಯಾದ ನೀವು ಚಾಸಾ–1 ರವರನ್ನು ಕುರಿತು ನನ್ನ ಮಗನೇ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ, ಆ ಮೂಲಕ ನೀವು **ಭಾ.ದಂ.ಸಂ. ಕಲಂ 506** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

ಸದರಿ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಆರೋಪಿಗಳ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾಧಾನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾಧನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿದೆ.)

**ಸ್ಥಳಃ ಚಿಂತಾಮಣಿ.** **ಸಹಿ/–**

**ದಿನಾಂಕಃ**22.05.2026 **ಅಪರ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಚಿಂತಾಮಣಿ.**

**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.</u>**

**<u>ಸಿ.ಸಿ.ನಂ.1002/2024</u>**

**<u>ಫಿರ್ಯಾದುದಾರರುಃ</u>** ಸರ್ಕಾರದ ಪರವಾಗಿಃ

ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**<u>ಆರೋಪಿಃ</u>** ಎ 1. ದೇವರಾಜ @ ದೇವ ಬಿನ್ ರಮೇಶ್,

1. ನೀವು ಮೇಲಿ ಓದಿ ಹೇಳಿದ ಮತ್ತು ವಿವರಿಸಿದ ದೋಷಾರೋಪಣೆಯನ್ನು ಅರ್ಥೈಸಿಕೊಂಡಿರುವಿರೋ ?

ಉತ್ತರಃ

2. ಮೇಲೆ ಮಾಡಿದ ಆಪಾಧನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ?

ಉತ್ತರಃ

(ಆರೋಪಿಯ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು, ಆಪಾಧಾನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾಧನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿದೆ.)

**ಸ್ಥಳಃ ಚಿಂತಾಮಣಿ.** **ಸಹಿ/-**

**ದಿನಾಂಕಃ 22-05-2026** **ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಚಿಂತಾಮಣಿ.**

**ಆರೋಪಿ ಸಹಿಃ**